# ಮಹಾನಗರ ಪಾಲಿಕೆ ಬೆಳಗಾವಿ

ಗುತ್ತಿಗೆ ಸಂಖ್ಯೆ.ಸಿಸಿಬಿ.ಲೋಇ.ಡಿಎಂ.ಸಿಇ.ಗು/06/2009-10 ದಿನಾಂಕ.24-11-2009.

## ಶೇಕಡಾವಾರ/ಐಟಂವಾರು ಟೆಂಡರ ಆಮಂತ್ರಣ ನೋಟಿಸು

1 ಈ ಕೆಳಕಂಡ ಸೂಚಿ ಪಟ್ಟಿಯಲ್ಲಿ ವಿವರಿಸಲಾದ ಕಾಮಗಾರಿಗಳಿಗಾಗಿ ಗುತ್ತಿಗಳನ್ನು ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ನೋಂದಾಯಿತ ಪ್ರಥಮ ದರ್ಜೆ/ದ್ವಿತೀಯ ದರ್ಜೆ/ತೃತೀಯ ದರ್ಜೆ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಪ್ರಕಾರ ಏಕ ಲಕೋಟೆ/ದ್ವಿತೀಯ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮದನ್ವಯ ಆಮಂತ್ರಿಸಲಾಗಿದೆ.

2 ಗುತ್ತಿಗೆದಾರರು ದಸ್ತಾವೇಜುಗಳನ್ನು (ಎರಡು ಸೆಟ್ಟುಗಳಲ್ಲಿ) ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ ಇವರ ಕಚೇರಿಯಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಈ ಕೆಳಕಂಡ ಸೂಚಿಪಟ್ಟಿ ಸೂಚಿಸಿದ ಬೆಲೆಯನ್ನು ನಗದು ಹಣ ಪಾವತಿಸಿ ಖರೀದಿಸುವುದು (ಫಾರ್ಮ ಬೆಲೆಯನ್ನು ಯಾವದೇ ಕಾರಣಕ್ಕೆ ಹಿಂದಿರುಗಿಸುವುದಿಲ್ಲ) ಆಸಕ್ತಿ ಹೊಂದಿರುವ ಗುತ್ತಿಗೆದಾರರು ಇದಕ್ಕಿಂತಲು ಹೆಚ್ಚಿನ ವಿವರಗಳನ್ನು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿಯ ವೇಳೆಯಲ್ಲಿ ಪಡೆಯಬಹುದು. ಗುತ್ತಿಗೆದಾರರ ಕೋರಿಕೆ ಮೇರೆಗೆ ಅಂಚೆ ವೆಚ್ಚ ರೂ. 250/- ಗಳನ್ನು ಗುತ್ತಿಗೆದಾರ ರಿಂದ ಭರಣಾ ಮಾಡಿಕೊಂಡು ಟೆಂಡರ್ ದಸ್ತಾವೇಜುಗಳನ್ನು ರಜಿಸ್ಟರ್ ಪೋಸ್ಟ್, ಎ.ಡಿ. ಸ್ಪೀಡ್ ಪೋಸ್ಟ್, ಅಂಚೆಯ ಮೂಲಕ ಕಳಿಸಲಾಗುವುದು. ಸದರಿ ಟೆಂಡರ್ ದಸ್ತಾವೇಜುಗಳು ಅಂಚೆಯಲ್ಲಿ ವಿಳಂಬದಿಂದ ಸರಿಯಾದ ಸಮಯದಲ್ಲಿ ಗುತ್ತಿಗೆದಾರರಿಗೆ ತಲುಪದೇ ಇದ್ದಲ್ಲಿ, ಇದಕ್ಕೆ ಸ್ವತಃ ಗುತ್ತಿಗೆದಾರರ ಹೊಣೆಗಾರರಾಗಿತ್ತಾರೆ.

3 ಈ ಕೆಳಗಿನ ಸೂಚಿ ಪಟ್ಟಿಯಲ್ಲಿ ಟೆಂಡರ್ ಕಾಮಗಾರಿಗೆ ನಿಗದಿಪಡಿಸಿದ ಮುಂಗಡ ಠೇವಣಿ ಹಣವನ್ನು ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರ ಹೆಸರಿನಲ್ಲಿ ಬೆಳಗಾವಿಯಲ್ಲಿ ಹಣಪಾವತಿ ಆಗುವಂತೆ ಬ್ಯಾಂಕರ್ಸ್ ಚೆಕ್/ಡಿಮಾಂಡ ಡ್ರಾಫ್ಟ/ ಪಿ ಆರ್ಡರ್ ರೂಪದಲ್ಲಿ ಗುತ್ತಿಗೆ ಸಲ್ಲಿಸಿದ ದಿನಾಂಕದಿಂದ ಗುತ್ತಿಗೆದಾರರ ಗುತ್ತಿಗೆ ದರಗಳ ಮಾನ್ಯತಾ ಅವಧಿಗಿಂತ 45 ದಿನಗಳವರೆಗೆ ಹೆಚ್ಚಿನ ಅವಧಿಯವರೆಗೆ ಅಂದರೆ 135 ದಿನಗಳ ವರೆಗೆ ಚಲಾವಣೆಯಲ್ಲಿರುವಂತೆ ಟೆಂಡರದೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

4 ಟೆಂಡರಗಳನ್ನು ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಕಚೇರಿಯಲ್ಲಿ ದಿನಾಂಕ. 21/12/2009 ರಂದು 4.00 ಗಂಟೆಯವರೆಗೆ ಸ್ವಿಕರಿಸಲಾಗುವುದು. ಮತ್ತು ಹಾಜರಿದ್ದ ಗುತ್ತಿಗೆದಾರರ ಸಮ್ಮುಖದಲ್ಲಿ ಅದೇ ದಿನ ಅಪರಾಹ್ನ 4.30 ಗಂಟೆಗೆ (ಸಾಧ್ಯವಾದರೆ) ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗುವುದು. ಟೆಂಡರಗಳನ್ನು ಸ್ವೀಕರಿಸಲು ನಿಗದಿಪಡಿಸಿದ ದಿನಾಂಕದಂದು ಸಾರ್ವತ್ರಿಕ ರಜೆ ಸಂಭವಿಸಿದ ಪಕ್ಷದಲ್ಲಿ ಅದಕ್ಕೆ ಬದಲಾಗಿ ಮರುದಿನ ಕಚೇರಿ ಕೆಲಸದ ದಿನದಂದು ಈ ಮೇಲೆ ನಿಗದಿಪಡಿಸಿದ ಸಮಯಕ್ಕೆ ಮತ್ತು ಅದೇ ಸ್ಥಳದಲ್ಲಿ ಗುತ್ತಿಗೆಗಳನ್ನು ಸ್ವೀಕರಿಸಲಾಗುವುದು ಮತ್ತು ತೆರೆಯಲಾಗುವುದು.

5 ಇನ್ನಿತರ ವಿವರಗಳನ್ನು ಗುತ್ತಿಗೆದಾರರು ಟೆಂಡರ ದಸ್ತಾವೇಜುದಲ್ಲಿ ನೋಡಬಹುದು.

| | | |
|---|---|---|
| 1 | ಖುಲ್ಲಾ ಟೆಂಡರ್ ಫಾರ್ಮಗಳಿಗೆ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : | 19/12/2009 ರಂದು 4.00 ಗಂಟೆವರೆಗೆ |
| 2 | ಖಾಲಿ ಟೆಂಡರ್ ಫಾರ್ಮಗಳನ್ನು ನೀಡುವ ದಿನಾಂಕ : | 19/12/2009 |
| 3 | ಸೀಲ್ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ದಿನಾಂಕ : | 21/12/2009. ರಂದು 4.00 ಗಂಟೆವರೆಗೆ |

| ಅ.ನಂ. | | ಕಾಮಗಾರಿ ಹೆಸರು | ಕೆಲಸದ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ | ಮುಂಗಡ ಠೇವಣಿ ಹಣ (ರ. ಗಳಲ್ಲಿ) | ಟೆಂಡರ ದಸ್ತಾವೇಜುಗಳ ಬೆಲೆ (ರೂ.ಗಳಲ್ಲಿ) | ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ |
|---|---|---|---|---|---|---|---|
| | | **12ನೇ ಹಣಕಾಸು 2009-10 (ರಸ್ತೆ ಮತ್ತು ಸೇತುವೆ)** | | | | | |
| 1 | | ರಾಮಸ್ವಾಮಿ ರಸ್ತೆಯಿಂದ 2ನೇ ರೇಲ್ವೆ ಗೇಟದವರೆಗೆ ಕಾಂಗ್ರೆಸ್ ರಸ್ತೆ ಮರುಡಾಂಬರೀಕರಣ ಮಾಡುವುದು. | 42.00 | ಕೆ.ಡಬ್ಲೂ.2 | 84000 | 4725 | 3 ತಿಂಗಳ |
| 2 | | 2ನೇ ರೇಲ್ವೆ ಗೇಟದಿಂದ 3ನೇ ಗೇಟದವರೆಗೆ ಇವರು ಕಾಂಗ್ರೆಸ್ ರಸ್ತೆ ಸುಧಾರಣೆ ಮಾಡುವುದು. (ಒಂದು ಬದಿ) | 9.50 | ಕೆ.ಡಬ್ಲೂ.1 | 23750 | 1125 | 3 ತಿಂಗಳ |
| 3 | | ಹೊಸ ವೀರಭದ್ರ ನಗರದ ಕ್ರಾಸಿನಲ್ಲಿ ನ್ಯಾಯಮಾರ್ಗದಲ್ಲಿ ಸಿ. ಡಿ. ನಿರ್ಮಾಣ ಮಾಡುವುದು. | 30.00 | ಕೆ.ಡಬ್ಲೂ.2 | 60000 | 3375 | 3 ತಿಂಗಳ |
| 4 | | ಮರಾಠಾ ಮಂಡಳ ಹತ್ತಿರ ಚರಂಡಿ ನಿರ್ಮಾಣ ಮಾಡುವುದು. | 21.50 | ಕೆ.ಡಬ್ಲೂ.2 | 43000 | 2475 | 3 ತಿಂಗಳ |

| | | | | | | | |
|---|---|---|---|---|---|---|---|
| | | **ಒಟ್ಟು ಮೊತ್ತ** | **103.00** | | | | |
| | | **12ನೇ ಹಣಕಾಸು ಯೋಜನೆಯಡಿಯಲ್ಲಿ (ಮುಕ್ತ ನಿಧಿ) ಸನ್ 2009-10** | | | | | |
| 5 | | ಶಾಂತೇಶ ಮೋಟರಿನಿಂದ ವ್ಯಾಕ್ಸಿನ ಡಿಪೋ ರಸ್ತೆ ರಾಘವೇಂದ್ರ ಮಠ ಕಾಂಗ್ರೆಸ್ ರಸ್ತೆ ಸುಧಾರಣೆ ಮಾಡುವದು. | 11.00 | ಕೆ.ಡಬ್ಲೂ.1 | 27500 | 1238 | 3 ತಿಂಗಳ |
| 6 | | ಖಾನಾಪುರ ರಸ್ತೆ ಎನ್.ಎಚ್ 4-ಎ ನಿಂದ ರೇಲ್ವೆ ಗೇಟ ಕಾಂಗ್ರೆಸ್ ರಸ್ತೆಯವರೆಗೆ ವ್ಯಾಕ್ಸಿನ ಡಿಪೋ ರಸ್ತೆ ಸುಧಾರಣೆ ಮಾಡುವದು. | 10.50 | ಕೆ.ಡಬ್ಲೂ.1 | 26250 | 1238 | 3 ತಿಂಗಳ |
| 7 | | ಮನ್ನೂರಕರ ಗಲ್ಲಿಯಲ್ಲಿ ಸಿ.ಸಿ ರಸ್ತೆ ನಿರ್ಮಾಣ ಮಾಡುವದು | 10.02 | ಕೆ.ಡಬ್ಲೂ.1 | 25050 | 1238 | 3 ತಿಂಗಳ |
| 8 | | ಮಹಾನಗರ ಸಭೆ ಉತ್ತರ ವಲಯ-2ರ ವ್ಯಾಪ್ತಿಯಲ್ಲಿ ಬಸ್ ತಂಗುದಾಣ ನಿರ್ಮಾಣ | 12.00 | ಕೆ.ಡಬ್ಲೂ.1 | 30000 | 1350 | 3 ತಿಂಗಳ |
| | | **ಒಟ್ಟು ಮೊತ್ತ** | **43.52** | | | | |
| 9 | | ತೆಗ್ಗಿನಕೆತಿ ಗಲ್ಲಿಯಲ್ಲಿರುವ ಹಳೆ ಕಟ್ಟಡವನ್ನು ನೇಲಸಮನಗೊಳಿಸಿ ಹೊಸದಾಗಿ ಆಸ್ಪತ್ರೆ, ಗ್ರಂಥಾಲಯ ಹಾಗೂ ವ್ಯಾಯಾಮ ಶಾಲೆ ಕಟ್ಟಿಸುವ ಸಲೂವಾಗಿ | 11.00 | ಕೆ.ಡಬ್ಲೂ.1 | 27500 | 1250 | 6 ತಿಂಗಳ |
| | | | 11.00 | | | | |
| | | **18% ಪಾಲಿಕೆ ನಿದಿ ( 2ನೇ ಕರೆ )** | | | | | |
| 10 | | ಡಾ! ಬಾಬು ಜಗಜೀವನರಾಮ ರವರ ಎ.ಪಿ.ಎಂ.ಸಿ ಉದ್ಯಾನವನದಲ್ಲಿ ಮೂರ್ತಿ ಪ್ರತಿಷ್ಟಾಪನೆ ಮಾದುವ ಕಾಮಗಾರಿ | 16.27 | ಕೆ.ಡಬ್ಲೂ.1 | 40690 | 1040 | 3 ತಿಂಗಳ |
| | | **ವಾರ್ಡ ಬಜೆಟ** | | | | | |
| 11 | | ವಾರ್ಡ ನಂ : 28 ರಲ್ಲೆ ಬರುವ ನಾಲಾ ಮೇಲೆ ಸಿಸಿ ಸ್ಯಾಭೆ ನಿರ್ಮಾಣ ಮಾದುವದು | 3.56 | ಕೆ.ಡಬ್ಲೂ.1 | 8900 | 450 | 3 ತಿಂಗಳ |
| | | **ಒಟ್ಟು** | 177.35 | | | | |

ಸಹಿ/-
**ನಗರ ಅಭಿಯಂತರು (ಉ)**
**ಮಹಾನಗರ ಪಾಲಿಕೆ ಬೆಳಗಾವಿ**

ಸಹಿ/-
**ನಗರ ಅಭಿಯಂತರು (ದ)**
**ಮಹಾನಗರ ಪಾಲಿಕೆ ಬೆಳಗಾವಿ**

ಸಹಿ/-
**ಮುಖ್ಯ ಲೇಕ್ಕಾಧಿಕಾರಿಗಳು**
**ಮಹಾನಗರ ಪಾಲಿಕೆ ಬೆಳಗಾವಿ**

ಸಹಿ/-
**ಅಯುಕ್ತರು**
**ಮಹಾನಗರ ಪಾಲಿಕೆ ಬೆಳಗಾವಿ**